Total No. of Questions : 29 ] [ Total No. of Printed Pages : 4

Code No. : **205-K**

**Diploma in Physical Education**

# ವಿಷಯಾಧಾರಿತ ಬೋಧನಾ ಪದ್ಧತಿ — ಕನ್ನಡ

# CONTENT BASED METHODOLOGY OF TEACHING — KANNADA

Date : 01. 06. 2018 ]

Time : 2.00 P.M. to 5.00 P.M. ] [ Max. Marks : 80

***ಸೂಚನೆಗಳು :*** i) ಪ್ರಶ್ನೆ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ.

ii) ಬರವಣಿಗೆ ಅಚ್ಚುಕಟ್ಟಾಗಿರಲಿ ಮತ್ತು ಅಂದವಾಗಿರಲಿ.

iii) ಸೂಚನೆಯಂತೆ ಉತ್ತರಿಸಿ ಮತ್ತು ಕಾಗದವನ್ನು ಅನಾವಶ್ಯಕವಾಗಿ ನಷ್ಟ ಮಾಡಬೇಡಿ.

## ಭಾಗ – I

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ತಲಾ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ***ಅ*** ಮತ್ತು ***ಬ*** ಉಪ–ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು : 4 × 8 = 32

1. ಅ) ಮಾತೃಭಾಷೆಯ ಅರ್ಥ ಮತ್ತು ಸ್ವರೂಪವನ್ನು ಬರೆಯಿರಿ.

   ಬ) ಪ್ರಾಥಮಿಕ ಶಾಲೆಯಲ್ಲಿಯ ಮಾತೃಭಾಷೆಯ ಲಕ್ಷಣಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಮೂರನ್ನು ವಿವರಿಸಿ. 4 + 4

2. ಅ) ಭಾಷಾ ಬೋಧನೆಯಲ್ಲಿ ಮಕ್ಕಳಿಗೆ ಆಲಿಸುವ ಸಾಮರ್ಥ್ಯವನ್ನು ಬೆಳೆಸಬೇಕಾದ ಅಗತ್ಯವನ್ನು ಚರ್ಚಿಸಿ.

   ಬ) ಮಾತುಗಾರಿಕೆಯನ್ನು ಉತ್ತಮಪಡಿಸುವಲ್ಲಿ ಸಂಭಾಷಣೆಯ ಪಾತ್ರವೇನು ? 4 + 4

3. ಅ) ಶಿಕ್ಷಕರು ಮಕ್ಕಳಲ್ಲಿ ಸೃಜನಶೀಲತೆಯನ್ನು ಹೇಗೆ ಬೆಳೆಸುವರು ?

ಬ) ಉತ್ತಮ ಕೈಬರಹದ ಲಕ್ಷಣಗಳಾವುವು ? 4 + 4

4. ಅ) ಪದ್ಯ ಬೋಧನೆಯಲ್ಲಿ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳಿಗಿರುವ ವ್ಯತ್ಯಾಸವೇನು ?

ಬ) ಪದ್ಯ ಬೋಧನೆಯ ಉದ್ದೇಶಗಳನ್ನು ವಿವರಿಸಿ. 4 + 4

5. ಅ) ಮಾತೃಭಾಷಾ ಕಲಿಕೆಗೆ ಉತಮ ಆಲಿಸುವಿಕೆಯೇ ಬುನಾದಿ. ಚರ್ಚಿಸಿ.

ಬ) ಗದ್ಯ ಬೋಧನೆಯ ವಿಧಾನಗಳನ್ನು ನಿರೂಪಿಸಿ. 4 + 4

6. ಅ) ಮಕ್ಕಳಲ್ಲಿ ಅರ್ಥಗ್ರಹಣ ಸಾಮರ್ಥ್ಯ ಯಾವಾಗ ಬೆಳೆಸಲು ಸಾಧ್ಯವಾಗುತ್ತದೆ ?

ಬ) ಅಣುಬೋಧನಾ ಪಾಠದ ಯೋಜನೆಯನ್ನು ತಯಾರಿಸುವ ವಿವಿಧ ಹಂತಗಳನ್ನು ಪಟ್ಟಿ ಮಾಡಿ, ವಿವರಿಸಿ. 4 + 4

7. ಅ) ಸುಂದರ ಬರಹದ ಪ್ರಯೋಜನಗಳನ್ನು ತಿಳಿಸಿ.

ಬ) ಮೇಲ್ವಿಚಾರಣೆ ಎಂದರೇನು ? ಅದರ ವಿಧಾನಗಳ ಪಟ್ಟಿ ಮಾಡಿ ಅವುಗಳಲ್ಲಿ ಮೂರನ್ನು ವಿವರಿಸಿ. 4 + 4

## ಭಾಗ – II

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಒಂದೂವರೆ ಪುಟಗಳಿಗೆ ಮೀರದಿರಲಿ. $6 \times 5 = 30$

8. ಭಾಷಾ ಬೋಧನಾ ಶಿಕ್ಷಕನ ವೈಯಕ್ತಿಕ ಸಾಮರ್ಥ್ಯಗಳನ್ನು ವಿವರಿಸಿ.

9. ಪ್ರಬಂಧ ಬೋಧನೆಯ ಉದ್ದೇಶಗಳನ್ನು ತಿಳಿಸಿ.

10. ಮಾತುಗಾರಿಕೆಗೆ ತರಬೇತಿ ನೀಡುವ ಅಂಶಗಳನ್ನು ತಿಳಿಸಿ.

11. ಗಟ್ಟಿ ಓದು ಮತ್ತು ಮೌನ ಓದಿನಿಂದ ಆಗುವ ಪ್ರಯೋಜನಗಳಾವುವು ?

12. ಮುದ್ರಿತ ಸಂಪನ್ಮೂಲಗಳು ಭಾಷಾ ಕಲಿಕೆಯಲ್ಲಿ ಬಹಳ ಉಪಯುಕ್ತ. ನಿರೂಪಿಸಿ.

13. ಕಪ್ಪು ಹಲಗೆ ಅತ್ಯುತ್ತಮ ಬೋಧನಾ ಸಾಧನ ನಿರೂಪಿಸಿ.

14. ಕ್ರೀಡಾ ವಿಧಾನ ಎಂದರೇನು ? ವಿಧಾನದ ಗುಣ ಮತ್ತು ಅವಗುಣಗಳನ್ನು ಬರೆಯಿರಿ.

15. ನೈದಾನಿಕ ಪರೀಕ್ಷೆಯ ಅರ್ಥ ಮತ್ತು ಸ್ವರೂಪವನ್ನು ಬರೆಯಿರಿ.

## ಭಾಗ – III

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ. $3 \times 3 = 9$

16. ಭಾಷಾ ಕಲಿಕೆಯಲ್ಲಿ ಕಂಠಪಾಠದ ಮಹತ್ವವೇನು ?

17. ದೃಕ್ ಶ್ರವಣೋಪಕರಣಗಳ ವಿವಿಧ ಬಗೆಗಳಾವುವು ? ಸಂಕ್ಷಿಪ್ತವಾಗಿ ವಿವರಿಸಿ.

18. ಶಿರೋನ್ನತ ಪ್ರಕ್ಷೇಪಣದ ( OHP ) ಮಹತ್ವವನ್ನು ಬರೆಯಿರಿ.

19. ವಾರ್ತಾ ಪತ್ರಿಕೆಗಳು ವಿದ್ಯಾರ್ಥಿಗಳ ಭಾಷಾ ಕಲಿಕೆಯಲ್ಲಿ ಹೇಗೆ ನೆರವಾಗುತ್ತವೆ ?

20. ಮುದ್ರಿತ ಸಂಪನ್ಮೂಲಗಳು ಭಾಷಾ ಕಲಿಕೆಯಲ್ಲಿ ಬಹಳ ಉಪಯುಕ್ತ ನಿರೂಪಿಸಿ.

## ಭಾಗ – IV

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : $9 \times 1 = 9$

21. ಭಾಷಾ ಕಲಿಕೆ ತತ್ತ್ವಗಳಲ್ಲಿ ಎರಡನ್ನು ಹೆಸರಿಸಿ.

22. ಪ್ರಾಥಮಿಕ ಭಾಷಾ ಅಧ್ಯಾಪಕನಿಗೆ ಇರಬೇಕಾದ ಶೈಕ್ಷಣಿಕ ಅರ್ಹತೆ ಏನು ?

23. ಕ್ರಿಯಾತ್ಮಕ ವ್ಯಾಕರಣ ಎಂದರೇನು ?

24. ನೈದಾನಿಕ ಪರೀಕ್ಷೆ ಎಂದರೇನು ?

25. ದಿನಚರಿ ಎಂದರೇನು ?

26. ಶಬ್ದ ಭಂಡಾರ ಎಂದರೇನು ?

27. ಘಟಕ ಯೋಜನೆ ಎಂದರೇನು ?

28. ಗೆಯ್ಮೆ ಪುಸ್ತಕ ಎಂದರೇನು ?

29. ಮೌನ ಓದು ಎಂದರೇನು ?